

ಹತ್ತಿಳಿದು ಹೋಗಬೇಕಿತ್ತು. ಸಾಗುವ ಮಾರ್ಗದಲ್ಲಿ ಟೀ ಎಸ್ಟೇಟು, ದಟ್ಟ ಕಾಡು, ಹಳ್ಳಗಳು ಜುಳುಗುಟ್ಟುವ ಕಣಿವೆಗಳು ಬಿಟ್ಟರೆ ಜನರ ಓಡಾಟವೂ ಅಷ್ಟಕಷ್ಟೆ. ಅತ್ಯಂತ ಸುಂದರವಾದ ಸ್ಥಳ. ನಿಸರ್ಗದ ಹಸಿರು ಉಸಿರಲ್ಲಿ ತನ್ಮಯಗೊಳ್ಳುವ ಸಮಯ. ಡಾರ್ಜಲಿಂಗ್ ಪರ್ವತಶ್ರೇಣಿಯ ಕಡೆಯಿಂದ ಹುಟ್ಟುವ ಮಹಾನಂದ ನದಿ ಇಲ್ಲಿ ತಣ್ಣಗೆ ಹರಿಯುತ್ತಾಳೆ. ಆಕೆಯ ಮಡಿಲಿನಲ್ಲಿ ನಾವು ನೋಡಬೇಕಾದ ಅನೇಕ ಹೊಸ ಪಕ್ಷಿಗಳಿವೆ. ಸಿಗಬಹುದು ಎಂದುಕೊಂಡ ಒಂದಷ್ಟು ಹಕ್ಕಿಗಳ ಪಟ್ಟಿ ಇಟ್ಟುಕೊಂಡಿದ್ದೇವೆ. ನಾಳೆ ಕೂಡ ಇಲ್ಲಿಗೆ ಬರುವುದಿದೆ. ಈ ದಿನ ಏನೇನು ಸಿಗಬಹುದೋ? ಗೊತ್ತಿಲ್ಲ. ಹುಡುಕಬೇಕು. ಅಲ್ಲಿ ಕಿರಿದಾದ ದಾರಿ. ಜೋಪಾನವಾಗಿ ಗಾಡಿ ಓಡಿಸಿಕೊಂಡು ಹೋಗುವುದಿತ್ತು. ನುರಿತ ರಂತೂ ಸಾಹು ಜತನದಿಂದ ನಮ್ಮ ಕರೆದುಕೊಂಡು ಹೊರಟ.

'ದಾರಿಯ ಸುತ್ತಮುತ್ತ ಗಮನಿಸುತ್ತಿರಿ ಯಾವುದಾದರೂ ಪಕ್ಷಿ ಕಂಡರೆ ಹೇಳಿರಿ' ಎಂದ. ನನಗಲ್ಲಿ ಮೊದಲು ಗ್ರೇಟ್ ಪಯೀಡ್ ಹಾರ್ನ್ ಬಿಲ್ ಹಕ್ಕಿ ಹುಡುಕಬೇಕಿತ್ತು. ಹೀಗಾಗಿ ಪ್ರತಿ ಮರ ಮರಗಳನ್ನು ಗಮನವಿಟ್ಟು ನೋಡುತ್ತಿದ್ದೆ. ಇದನ್ನು ಭಾರತದ ದೊಡ್ಡ ಗಮಟೆಹಕ್ಕಿ ಎಂದೂ ಕರೆಯುತ್ತಾರೆ. ಕನ್ನಡದಲ್ಲಿ ಮಂಗಟ್ಟೆ ಎಂಬ ಇನ್ನೊಂದು ಹೆಸರೂ ಇದೆ. ಬಾಗಿದ ದೊಡ್ಡ ಹಳದಿ ಕೊಕ್ಕಿಗೆ ಮೇಲೆ ಕೊಂಬಿನಂತಹ ವಿಶೇಷ ಟೊಪ್ಪಿಗೆ ಇದೆ. ಕಪ್ಪು ಮತ್ತು ಬಿಳಿಯ ದೇಹದ ಅತ್ಯಂತ ಸುಂದರ ಹಕ್ಕಿಯಿದು. ಹಾರಿದಾಗ ಹೆಲಿಕಾಪ್ಟರ್ ಆಗಸದಲ್ಲಿ ಚಲಿಸಿದಂತಹ ದನಿ ಕೇಳಿ ಬರುತ್ತದೆ. ಮೊದಲ ಸಲ ಈ ಶಬ್ದವನ್ನು ಶರಾವತಿ ಹಿನ್ನೀರಿನ ತುಮರಿ ಬ್ಯಾಕೋಡಿನ ಕಾಡಿನಲ್ಲಿ ಕೇಳಿ ಗಾಬರಿಗೊಂಡಿದ್ದೆ. ಅಲ್ಲಿ ಗುಡ್ಡದ ಮೇಲೆ ನಡೆಯುವಾಗ ನೆಲದ ಮೇಲೆ ಮಣ್ಣು ತಿನ್ನಲು ಕೂತಿದ್ದ ಇವು ದಿಢೀರನೆ ಹಾರಿ ಗಲಿಬಿಲಿಗೊಳಿಸಿದ್ದವು. ದನಿ ಮಾತ್ರ ಮಧುರವಾಗಿರಲಿಲ್ಲ. ನಾಯಿಗಳ ಕೂಗಿನಂತೆ ಕರ್ಕಶವಾಗಿತ್ತು. ಉತ್ತಮ ದೇಹ, ಬಣ್ಣ, ಗಾತ್ರ, ಸೂಕ್ಷ್ಮತೆ ಎಲ್ಲಾ ಪಡೆದ ಈ ಹಕ್ಕಿಗೆ ಪ್ರಕೃತಿ ಸ್ವರದ ವಿಷಯದಲ್ಲಿ ಮಾತ್ರ ಮಹಾ ದ್ರೋಹ ಮಾಡಿದಂತೆ ಕಾಣುತ್ತಿತ್ತು. ನಿಸರ್ಗ ಹಾಗೆಯೇ ತುಂಬಾ ಕೊಟ್ಟು ಒಂದನ್ನು ಕಿತ್ತಿಟ್ಟುಕೊಳ್ಳುತ್ತದೆ.

ಅತಿ ಸೂಕ್ಷ್ಮ ಸ್ವಭಾವದ ಈ ಹಕ್ಕಿಯ ಹೇಳಿಕೊಳ್ಳುವಂತಹ ಚಿತ್ರವೊಂದು ನನ್ನ ಬಳಿ ಇರಲಿಲ್ಲ. ಈ ಮೊದಲು ಅಲ್ಲಲ್ಲಿ ಇದರ ಅರೆಬರೆ ಚಿತ್ರಗಳನ್ನು